**ದಿಃ12.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**
**ಮುಂದುವರೆದ ಪಾಟೀಸವಾಲುಃ 03 ನೇ ಪ್ರತಿವಾದಿ ಪರ ಶ್ರೀ.ಹೆಚ್.ಆರ್.ಎಂ. ವಕೀಲರಿಂದಃ**

ತಂಗಪಳಂ 1995 ರಿಂದ ಸ್ವಾಧೀನದಲ್ಲಿದ್ದರು ಹಾಗೂ ನಾನು 2018 ರಲ್ಲಿ ಎಸ್.ಸಿ.15275/2018 ದಾಖಲಿಸಿದ್ದು ಎಂದರೆ ಸರಿ. ಅದೇ ರೀತಿ 03 ನೇ ಪ್ರತಿವಾದಿ ಸಹ 1995 ರಿಂದಲೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. 03 ನೇ ಪ್ರತಿವಾದಿ ತಂಗಪಳಂ ರವರಿಗೆ ಸಹೋದರಿ ಇರುತ್ತಾರೆ. ಸದರಿ ಇಬ್ಬರು ಒಟ್ಟಿಗೆ ಅದೇ ಮನೆಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ 400 ಅಡಿಯಲ್ಲಿ ಇದ್ದರು ಎಂದರೆ ಸರಿಯಲ್ಲ. 03 ನೇ ಪ್ರತಿವಾದಿ ಎಲ್ಲಿ ವಾಸ ಇದ್ದದ್ದು ಎಂದರೆ ಆಕೆ ಎಲ್ಲಿವಾಸ ಇದ್ದದ್ದು ಗೊತ್ತಿಲ್ಲ ಎನ್ನುತ್ತಾರೆ. ನಾನು 03 ನೇ ಪ್ರತಿವಾದಿಗೆ ಸದರಿ ಜಾಗದಿಂದ ಖಾಲಿ ಮಾಡಿ ಎಂದು ನೋಟಿಸು ಕೊಟ್ಟಿದ್ದೇ ಎಂರದೆ ಸರಿ. ಸಾಕ್ಷಿ ಮುಂದುವರೆದ ಅವರು ಕಾನೂನು ಭಾಹಿರವಾಗಿ ಇದ್ದರು ಮತ್ತು

This is a True Copy of the Court Records Online. Authenticated @ districts.ecourtsindia.com/cnr/KABC0A0025232023/truecopy/order-3.pdf

www.ecourtsindia.com



ನ್ಯಾಯಾಲಯದಿಂದ ನನಗೆ ಆದೇಶ ಸಿಕ್ಕಿತ್ತು ಎನ್ನುತ್ತಾರೆ. ನಾನು ನ್ಯಾಯಾಲಯದಿಂದ ನನಗೆ ಆದೇಶ ಸಿಕ್ಕಿತ್ತು ಎನ್ನುವ ಬಗ್ಗೆ ನ್ಯಾಯಾಲಯದ ಆದೇಶ ಪ್ರತಿ ಹಾಜರು ಪಡಿಸಿದ್ದೇನೆ. ಸಾಕ್ಷಿ ಪುನಃ ಸದರಿ ದಾಖಲೆಯನ್ನು ಪರಿಶೀಲಿಸಬೇಕು ಎನ್ನುತ್ತಾರೆ. ನನಗೆ ನ್ಯಾಯಾಲಯದಿಂದ ನನಗೆ 3 ನೇ ಪ್ರತಿವಾದಿಗೆ ನೋಟಿಸು ನೀಡಬೇಕು ಎಂದು ಆದೇಶ ಆಗಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1995 ರಿಂದಲೂ 03 ನೇ ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿದ್ದ ಕಾರಣ ನಾನು ಆಕೆಗೆ ನೋಟಿಸು ನೀಡಿದ್ದು ಎಂದರೆ ಸರಿಯಲ್ಲ. ನಾನು Ex. No.15112/2019 ರಲ್ಲಿ ಸ್ವಾಧೀನವನ್ನು ಜುಲೈ 2022 ರಲ್ಲಿ ಪಡೆದಿರುತ್ತೆನೆ. ನಾನು ಜಾರಿ ಅರ್ಜಿಯ ಅಡಿ ಸಂಪೂರ್ಣ ಸ್ವತ್ತಿನ ಸ್ವಾಧೀನವನ್ನು ಪಡೆದಿದ್ದೇನೆ. ಆ ಬಗ್ಗೆ ಸ್ಕೇಚ್ ಹಾಜರು ಪಡಿಸಿದ್ದೇನೆ. ನಾನು ಸಂಪೂರ್ಣ ಸ್ವಾಧೀನ ಪಡೆದಿರುತ್ತೇನೆಂದು Ex. No.15112/2019 ರಲ್ಲಿ ತಿಳಿಸಿದ್ದೇನೆ. ಸದರಿ ಪ್ರಕರಣದಲ್ಲಿ ಬೇಲಿಫ್ ಸಲ್ಲಿಸಿರುವ ವರದಿ ಹಾಜರು ಪಡಿಸಲು ತೊಂದರೆ ಇಲ್ಲ. 03 ನೇ ಪ್ರತಿವಾದಿ Illegal trespass ಮಾಡಿದ್ದರಿಂದ ಅವರಿಗೆ ನಾನುನೋಟಿಸುಕೊಟ್ಟದ್ದು. ಅವರು ನನ್ನ ಪರವಾಗಿ ಡಿಕ್ರಿಯಾದ ನಂತರ ಆ ರೀತಿ Illegal trespass ಮಾಡಿರುತ್ತಾರೆ. Ex. No.15112/2019 ಪ್ರಕರಣದಲ್ಲಿ 03 ನೇ ಪ್ರತಿವಾದಿ Objector ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ತಕರಾರು ಸಲ್ಲಿಸಿದ್ದು ಆ ನಂತರ ನ್ಯಾಯಾಲಯ ಆ ಬಗ್ಗೆ ಆದೇಶ ಮಾಡಿದೆ ಎಂದರೆ ಸರಿ. ನ್ಯಾಯಾಲಯದಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KABC0A0025232023/truecopy/order-3.pdf

ಅವರ ಸ್ವಾಧೀನಕ್ಕೆ ಭಂಗ ತರಬಾರದು ಎಂದು ಆದೇಶ ಮಾಡಿದ್ದರು ಎಂದರೆ ಸಾಕ್ಷಿ Due process of law ಪ್ರಕಾರ ಹೋಗಿ ಎಂದು ಹೇಳಿದ್ದಾರೆ ಎನ್ನುತ್ತಾರೆ. ನಾನು ದಿಃ15.03.2022 ರ ಆದೇಶವನ್ನು ಪ್ರಶ್ನೀಸಿಸಲಿಲ್ಲ ಎಂದರೆ ಸಾಕ್ಷಿ ಆದೇ ಕಾರಣಕ್ಕೆ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಇಂದಿಗೂ ದಿಃ15.03.2022 ರ ಆದೇಶ ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ. ನಾನು ದಿಃ15.03.2022 ರ ಆದೇಶದ ಬಗ್ಗೆ ನನ್ನ ದಾವೆಯಲ್ಲಿ ಹೇಳಿದ್ದೇನೆ. ನಾನು ನನ್ನ ದಾವೆಯಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ಸದರಿ ದಿಃ15.03.2022 ರ ಆದೇಶದ ಬಗ್ಗೆ ಹೇಳದೇ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ದಿಃ15.03.2022 ರ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ನಾನು ದಿಃ15.03.2022 ರ ಆದೇಶದ ಪ್ರತಿ ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಭೇಲಿಫ್ ವರದಿಯನ್ನು ಸಹ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾವು 01 ಗಂಡು ಮತ್ತು 03 ಹೆಣ್ಣು ಮಕ್ಕಳು ಇರುತ್ತೇವೆ. ಇಬ್ಬರು ಅಕ್ಕಂದಿರು Release deed ಬರೆದುಕೊಟ್ಟಿದ್ದಾರೆ. ಮತ್ತೊಬ್ಬರು ಅಕ್ಕ 2015 ರಲ್ಲೇ ಮೃತ ಪಟ್ಟಿದ್ದಾರೆ. ಆಕೆಗೆ ವಾರಸುದಾರರು ಇಲ್ಲ. ನಾನು Ex. No.15112/2019 ರಲ್ಲಿ ನನಗೆ ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎನ್ನುವ ಆದೇಶ ಇದ್ದರು ಸಹ ಅದನ್ನು ತಿಳಿಸದೇ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶಗಳನ್ನು ಮರೆ ಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ Ex. No.15112/2019 ರಲ್ಲಿನ objector Petition

This is a True Copy of the Court Records Online. Authenticated @ districts.ecourtsindia.com/cnr/KABC0A0025232023/truecopy/order-3.pdf

ಮೇಲಿನ ಆದೇಶ ಮತ್ತು ಅದೇ ಪ್ರಕರಣದಲ್ಲಿ ಬೇಲಿಫ್ ವರದಿ ಹಾಜರು ಪಡಿಸಲು ತೊಂದರೆ ಇಲ್ಲ. ನಿ.ಪಿ.19 ರಂತೆ 03 ನೇ ಪ್ರತಿವಾದಿ ನನಗೆ reply ನೀಡಿದ್ದಾರೆಂದರೆ ಸರಿ. ಸದರಿ reply ನಲ್ಲಿ ತಿಳಿಸಿರುವ ಷೆಡ್ಯೂಲನಲ್ಲಿ 03 ನೇ ಪ್ರತಿವಾದಿ ವಾಸವಾಗಿದ್ದಾರೆಂದರೆ ಸರಿಯಲ್ಲ. ಆಕೆ ವಾಸ ಇದ್ದ ಷೆಡ್ಯೂಲನ್ನು ನಾನು ತಿಳಿಸಿಲ್ಲ. ನಿ.ಪಿ.19 ರಲ್ಲಿ ತಿಳಿಸಿದ ಷೆಡ್ಯೂಲನಲ್ಲಿ 03 ನೇ ಪ್ರತಿವಾದಿ 1995 ರಿಂದ ವಾಸ ಇದ್ದಾರೆಂದರೆ ಸರಿಯಲ್ಲ. ನಿ.ಪಿ.19 ರಲ್ಲಿ ತಿಳಿಸಿರುವ ಷೆಡ್ಯೂಲ್ ಮತ್ತು Ex.No.15112/2019 ರಲ್ಲಿ 03 ನೇ ಪ್ರತಿವಾದಿಗೆ ಆದೇಶವಾಗಿರುವ ಸ್ವತ್ತಿನ ಷೆಡ್ಯೂಲ್ ಒಂದೇ ಎಂದರೆ ಸರಿಯಲ್ಲ. 1995 ರಿಂದಲೂ ಆಕೆ ಸ್ವಾಧೀನದಲ್ಲಿ ಇದ್ದ ಕಾರಣ ದಿಃ15.03.2022 ರ ಆದೇಶದಲ್ಲಿ ನ್ಯಾಯಾಲಯ ಆಕೆಗೆ ತೊಂದರೆ ಮಾಡಬಾರದು ಎಂದರೆ ಹೇಳಿದ್ದು ಎಂದರೆ ಸಾಕ್ಷಿ ತೊಂದರೆ ಮಾಡಬಾರದು ಆದರೆ due process of law ಪ್ರಕಾರ ಹೋಗಬಹು ದು ಎಂದು ಹೇಳಿದೆ ಎನ್ನುತ್ತಾರೆ.

**01 ಮತ್ತು 02 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**73 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು**

This is a True Copy of the Court Records Online. Authenticated @ districts.ecourtsindia.com/cnr/KABC0A0025232023/truecopy/order-3.pdf

ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0A0025232023/truecopy/order-3.pdf

www.ecourtsindia.com